ಸವದತ್ತಿ ತಾಲ್ಲೂಕಿನಲ್ಲಿ ಅರಣ್ಯ ಇಲಾಖೆಯಿಂದ ಶಾಲಾ ಆವರಣದ ಸುತ್ತಲೂ ಗಿಡಗಳನ್ನು ಬೆಳೆಸುವ ಕಾರ್ಯಕ್ರಮ

421 (3743) : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅರಣ್ಯ ಇಲಾಖೆಯಿಂದ ಶಾಲಾ ಆವರಣದಲ್ಲಿ ಗಿಡಗಳನ್ನು ಬೆಳೆಸಲು ಈ ವರ್ಷ ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. (ತಾಲ್ಲೂಕುವಾರು ವಿವರ ನೀಡುವುದು)

ಆ) ಸವದತ್ತಿ ತಾಲ್ಲೂಕಿನ ಕಾರಿಮನಿಯಲ್ಲಿರುವ ನಿತಿನ್ ಎಜುಕೇಶನ್ ಸೊಸೈಟಿಯವರು ನಡೆಸುತ್ತಿರುವ ಶಾಲೆಯ ಸುತ್ತಲೂ ಸಾಕಷ್ಟು ಸ್ಥಳ ಇರುವುದರಿಂದ ಅಲ್ಲಿ ಅರಣ್ಯ ಇಲಾಖೆಯವರು ಗಿಡಗಳನ್ನು ಬೆಳೆಸಲು ಕ್ರಮ ಕೈಗೊಳ್ಳಲಾಗುವುದೇ:

ಇ) ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕುಗಳಲ್ಲಿ ಎಷ್ಟು ಶಾಲೆಯ ಆವರಣದಲ್ಲಿ ಗಿಡಗಳನ್ನು ಬೆಳೆಸಲು ಕ್ರಮ ಕೈಗೊಳ್ಳಲಾಗಿದೆ:

ಈ) ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕುಗಳಲ್ಲಿ ಅರಣ್ಯ ಇಲಾಖೆಯವರು ಶಾಲಾ ಆವರಣದಲ್ಲಿ ಗಿಡಗಳನ್ನು ಬೆಳೆಸಲು ಹಿಂದೇಟು ಹಾಕುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ:

ಉ) ಹಾಗಿದ್ದಲ್ಲಿ, ಗಿಡಗಳನ್ನು ಬೆಳೆಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಕೆ. ಹೆಚ್. ರಂಗನಾಥ್ (ಅರಣ್ಯ ಸಚಿವರು)

ಅ) ಬೆಳೆಗಾಗಿ ಜಿಲ್ಲೆಯಲ್ಲಿ ಶಲಾವನ ಬೆಳಸಲು ಆಯ್ಕೆ ಮಾಡಿದ ಶಾಲೆಗಳ ತಾಲ್ಲೂಕುವಾರು ವಿವರ ಈ ಕೆಳಗಿನಂತಿದೆ.

ತಾಲ್ಲೂಕು	ಆಯ್ಕೆ ಮಾಡಿದ ಶಾಲೆಗಳು
1. ಬೆಳಗಾವಿ	3
2. ಬೈಲಹೊಂಗಲ	2
3. ಖಾನಾಪುರ	2
4. ಗೋಕಾಕ್	11
5. ರಾಯಬಾಗ	8
6. ಆಥಣಿ	12
7. ಸವದತ್ತಿ	1
8. ರಾಮದುರ್ಗ	3
9. ಚಿಕ್ಕೋಡಿ	2
ಒಟ್ಟು	**44**

ಆ) ಉಪ ಅರಣ್ಯ ಸಂರಕ್ಷಣಾಧಿಕಾರಿ, ಘಟಪ್ರಭಾ ವಿಭಾಗ, ಗೋಕಾಕ್ ಇವರು ನಿತಿನ್ ಎಜುಕೇಶನ್ ಸೊಸೈಟಿಯ ಕಾರಿಮನಿ ಶಾಲೆಯಲ್ಲಿ ಗಿಡ ಬೆಳೆಸಲು ಕ್ರಮ ಕೈಗೊಂಡಿರುತ್ತಾರೆ.

ಇ) ಬೈಲಹೊಂಗಲ ತಾಲ್ಲೂಕಿನ 2 ಶಾಲೆಗಳಲ್ಲಿ ಮತ್ತು ಸವದತ್ತಿ ತಾಲ್ಲೂಕಿನ 1 ಶಾಲೆಯಲ್ಲಿ ಗಿಡ ಬೆಳೆಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಚಾಮರಾಜನಗರ ಮುಜರಾಯಿ ದೇವಸ್ಥಾನಗಳ ದುರಸ್ತಿ

422 (3760) : ಶ್ರೀ ಎ.ಆರ್. ಕೃಷ್ಣ ಮೂರ್ತಿ (ಸಂತೇಮರಳ್ಳಿ) ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಾಮರಾಜನಗರ ಹಾಗೂ ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ ದುರಸ್ತಿ ಹಾಗೂ ಅಭಿವೃದ್ಧಿಗಾಗಿ ತೆಗೆದುಕೊಳ್ಳಲಾಗಿರುವ ದೇವಸ್ಥಾನಗಳು ಯಾವುವು; ಕ್ಷೇತ್ರವಾರು, ಗ್ರಾಮವಾರು ವಿವರ ನೀಡುವುದು;

ಆ) ಈ ದೇವಸ್ಥಾನಗಳ ಅಭಿವೃದ್ಧಿ ಹಗೂ ದುರಸ್ತಿಗಾಗಿ ಮಂಜೂರು ಮಾಡಲಾಗಿರುವ ಹಾಗೂ ಬಿಡುಗಡೆಯಾಗಿರುವ ಹಣ ಎಷ್ಟು; ಉಳಿದ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀಮತಿ ಸುಮವಸಂತ್ (ಮುಜರಾಯಿ ರಾಜ್ಯ ಸಚಿವರು)

ಅ) ಚಾಮರಾಜನಗರ ಹಾಗೂ ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ ದುರಸ್ತಿ ಹಾಗೂ ಅಭಿವೃದ್ಧಿಗಾಗಿ ತೆಗೆದುಕೊಳ್ಳಲಾಗಿರುವ ದೇವಸ್ಥಾನಗಳು ಕ್ಷೇತ್ರವಾರು, ಗ್ರಾಮವಾರು ವಿವರ ಅನುಬಂಧ–1,2 ರಲ್ಲಿ ಲಗತ್ತಿಸಿದೆ.

ಆ) ದೇವಾಲಯಗಳ ಅಭಿವೃದ್ಧಿ ಹಾಗೂ ದುರಸ್ತಿಗಾಗಿ ಮಂಜೂರು ಮಾಡಲಾಗಿರುವ ಹಾಗೂ ಬಿಡುಗಡೆಯಾಗಿರುವ ಕ್ಷೇತ್ರವಾರು ವಿವರ ಈ ಕೆಳಕಂಡಂತಿದೆ.

ಚಾಮರಾಜನಗರ ಜಿಲ್ಲೆ (ರೂ. ಲಕ್ಷಗಳಲ್ಲಿ)

	ಕ್ಷೇತ್ರ	ಮಂಜೂರು ಮಾಡಿರುವ ಹಣ	ಬಿಡುಗಡೆ ಹಣ	ಉಳಿಕೆ
1.	ಚಾಮರಾಜನಗರ	1.00	1.00	–
2.	ಯಳಂದೂರು	1.25	1.25	–
3.	ಕೊಳ್ಳೇಗಾಲ	2.25	2.25	–
4.	ಗುಂಡ್ಲುಪೇಟೆ	4.50	4.50	–
	ಒಟ್ಟು	9.00	9.00	–
	ಮೈಸೂರು ಜಿಲ್ಲೆ			
1.	ಕೃಷ್ಣರಾಜ ಕ್ಷೇತ್ರ	1.25	1.25	–
2.	ಚಾಮರಾಜ ನಗರ	0.50	0.50	–
3.	ನರಸಿಂಹರಾಜ	0.75	0.75	–
4.	ಟಿ. ನರಸೀಪುರ	0.50	0.50	–
5.	ಬನ್ನೂರು	0.50	0.50	–
6.	ನಂಜನಗೂಡು	1.00	1.00	–
7.	ಹುಣಸೂರು	2.00	2.00	–